# ಕಲಹಗಳು ಉಧ್ಭವಿಸುವಾಗ



## ಸಬ್ಬತ್ತಿನ ಮಧ್ಯಾಹ್ನ

**ಈ ವಾರದ ಅಧ್ಯಾಯನಕ್ಕಾಗಿ ಓದಿರಿ: ಅ.ಕೃ 6:1–6; ಅ.ಕೃ 10:1–23, ಮತ್ತಾಯ 5:17–20, ಅ.ಕೃ 11:3–24, ಅ.ಕೃ 15:1–22 ಆಮೋಸ 9:11–12.**

**ಸ್ಮರಣ ವಾಕ್ಯ: ಹೇಗೆಂದರೆ ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ. ನೀವೆಲ್ಲರೂ ಕ್ರಿಸ್ತಯೇಸುವಿನಲ್ಲಿ ಒಂದೇ ಆಗಿರುವುದರಿಂದ ಯೆಹೂದ್ಯನು ಗ್ರೀಕನು ಎಂದೂ ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ, ಭೇದವಿಲ್ಲ. ಗಲಾತ್ಯ 3:27,28.**

ಸಭೆಯ ಧ್ಯೇಯವನ್ನು ಗುರುತಿಸುವ ವಿಷಯದಲ್ಲಿ ಕ್ರೈಸ್ತ ಸಮುದಾಯದಲ್ಲಿ ಭಿನ್ನಾಭಿಪ್ರಾಯಗಳು ಬಂದಾಗ ಆ ಸಂದರ್ಭದಲ್ಲಿ ಐಕ್ಯತೆಯನ್ನು ಕಾಪಾಡಿ ಕೊಳ್ಳುವ ಕೆಲಸವು ಬಹು ಕಷ್ಟಕರವಾದದ್ದಾಗಿದೆ, ಇಂಥಹ ಭಿನ್ನಾಬಿಪ್ರಾಯಗಳಿಂದ ಸಭೆಯು ಹಾಳಾಗುವ ಪರಿಸ್ಥಿತಿ ಎದುರಿಸುತ್ತದೆ. ಇಂಥ ಭಿನ್ನಾಬಿಪ್ರಾಯಗಳು ಸಭೆಯ ಮೇಲೆ ಅಪಾಯಕಾರಿ ಪರಿಣಾಮ ಬೀರುತ್ತವೆ.

ಇಂದಿನ ಕ್ರೈಸ್ತರ ಸಮುದಾಯವು ಹೊಸ ಒಡಂಬಡಿಕೆಯ ಕ್ರೈಸ್ತ ಸಮುಧಾಯಕ್ಕಿಂತ ವಿಭಿನ್ನವೇನು ಅಲ್ಲ. ಜನರು ಜನರೇ ಮುಖ್ಯವಾದ ಅಂಶಗಳಲ್ಲಿಯೂ ಭಿನ್ನಾಭಿಪ್ರಾಯಗಳು ಬರುತ್ತವೆ. ಹಿಂದಿನ ಕ್ರೈಸ್ತರು ವೈಯುಕ್ತಕವಾದ

ದುರಾಭಿಪ್ರಾಯಗಳಿಂದ ಅನೇಕ ವಿವಾದಗಳು ಉಂಟಾಗುತ್ತಿದ್ದವು ಮತ್ತು ಹಳೆಯ ಒಡಂಬಡಿಕೆಯ ಕಥೆಗಳನ್ನು ಮತ್ತು ಸಂಪ್ರದಾಯಗಳನ್ನು ತಪ್ಪಾದ ವಿವರಣೆಗಳಿಂದ ಸಭೆಯು ಬೆಳೆಯುವ ಹಂತದಲ್ಲಿಯೇ ಹಾಳು ಆಗುತ್ತಿದ್ದವು. ಅದರೆ ಅಪೊಸ್ತಲರು ಮತ್ತು ಹಿರಿಕರು ಪವಿತ್ರಾತ್ಮನ ಸಹಾಯದಿಂದ ಮತ್ತು ವಾಕ್ಯಗಳ ಮೂಲಕ ಇಂಥ ವಿವಾದಗಳನ್ನು ಪರಿಹರಿಸುತ್ತಿದ್ದರು. ಕೆಲವು ವಾರಗಳ ಹಿಂದೆಯೇ ನಾವು ಆದಿ ಸಭೆಯ ಐಕ್ಯತೆಯ ಅನುಭವಗಳ ಬಗ್ಗೆ ಆಧ್ಯಾಯನ ಮಾಡಿದ್ದೇವು. ಈ ವಾರ ನಾವು ಆದಿ ಸಭೆಯ ಐಕ್ಯತೆಯ ಅಳಿವು ತಮ್ಮ ಒಳ್ಳ ಜಗಳಗಳ/ವಿವದಗಳನ್ನು ಹೇಗೆ ಪರಿಹರಿಸಿದರು ಎಂಬುದನ್ನು ನೋಡೋಣ. ಆ ವಿವಾದಗಳು ಯಾವುವು? ಅವು ಹೇಗೆ ಬಗೆಹರಿದವು. ಇಂದು ನಾವು ಈ ಅನುಭವಗಳ ಮೂಲಕ ಏನು ತಿಳಿದುಕೊಳ್ಳಬಹುದು?

**ಭಾನುವಾರ** **ನವೆಂಬರ್ 11**

**ಜನಾಂಗೀಯ ಪಕ್ಷಪಾತ**

**ಅ.ಕೃ. 6:11 ಓದಿರಿ: ಆದಿ ಸಭೆಯ ವಿಧವೆಯರಿಗೆ ಸರಿಯಾಗಿ ಆಹಾರ ವಿತರಣೆಯಾಗುತ್ತಿಲ್ಲ ಎಂದು ಹೇಳಲು ಯಾವ ಸಮಸ್ಯೆಯು ಕಾರಣವಾಯಿತು?**

______________________________________________

______________________________________________

ಕೆಲವು ಆದಿ ಕ್ರೈಸ್ತರು ಗ್ರೀಕ್ ವಿಧವೆಯರಿಗೆ ಪಕ್ಷಪಾತ ಮಾಡುತ್ತಿದ್ದರು. ಅವರಿಗೆ ಇಬ್ರಿಯರ ವಿಧವೆಯಗಿಂತ ಕಡಿಮೆ ಆಹಾರ ಕೊಡುತ್ತಿದ್ದರು. ಇಂಥ ಪಕ್ಷಪಾತವು ಆದಿ ಸಮುದಾಯದ ನಂಬುವ ಜನರಲ್ಲಿ ಒಡಕು ಮೂಡಿಸಿತ್ತು. ಅಂಥ ಪಕ್ಷಪಾತವು ನಿಜವೋ ಅಥವಾ ಇಲ್ಲವೋ ಎಂಬುದನ್ನು ವಾಕ್ಯವು ತಿಳಿಸುವುದಿಲ್ಲ ಕೆಲವರು ಅದು ನಿಜವೆಂದು ತಿಳಿದಿದ್ದರು ಎಂದು ವಾಕ್ಯವು ತಿಳಿಸುತ್ತದೆ. ಇಂಥ ವಿವಾದವು ಸಭೆಯ ಐಕ್ಯತೆಗೆ ಮೊದಲಿಂದಲೂ ಅಡ್ಡಿಯಾಗಿತ್ತು. ಆದಿ ಸಭೆಯಲ್ಲಿ ಇಂಥ ಜನಾಂಗೀಯ ಬಿರುಕು ಇತ್ತು.

**ಅ.ಕೃ. 6:2–6 ಓದಿರಿ: ಆದಿ ಸಭೆಯಲ್ಲಿ ಇಂಥ ಅಪಾರ್ಥಗಳನ್ನು ಪರಿಹರಿಸಲು ಯಾವ ಸರಳವಾದ ಕ್ರಮಗಳನ್ನು ಕೈಗೊಳ್ಳುತ್ತಿದ್ದರು?**

______________________________________________

______________________________________________

ಆದಿ ಸಭೆಗಳು ಬಹಳ ಬೇಗನೆ ಬೆಳೆದವು ಈ ಬೆಳವಣಿಗೆಯಿಂದ ಅಪೊಸ್ತಲರಿಗೆ ಅಪಾರವಾದ ಭಾರವಾಯಿತು ಹಾಗಾಗಿ ಏಳು ಜನರೂ ಸೇವಕರನ್ನು ಅಪೊಸ್ತಲರ ಸಹಾಯಕ್ಕೆಂದು ಯೆರುಸಲೇಮಿನ ಸಭೆಯಲ್ಲಿ ಆರಿಸಿಕೊಂಡರು ಮತ್ತು ಸಭೆಯ ಸೇವೆಯಲ್ಲಿ ಹೆಚ್ಚು ಜನರು ನೆರವಾದರು.

ಅಪೋಸ್ತಲರು ಗಮನವಿಟ್ಟು ಗ್ರೀಕ್ ಭಾಷೆಯವರ ಈ ದೂರನ್ನು ಕೇಳುತ್ತಿದ್ದರು ಮತ್ತು ಇದಕ್ಕೆ ಪರಹಾರವೇನೆಂದು ಕೇಳುತ್ತಿದ್ದರು. ಈ ಏಳು ಜನರ ಆಯ್ಕೆಯನ್ನು ಇವರಿಗೆ ಬಿಟ್ಟುಕೊಟ್ಟರು. ಆ ಏಳು ಜನ ಶಿಷ್ಯರು ಗ್ರೀಕ್ ಭಾಷೆಯವರೇ ಆಗಿರಬೇಕು ಎಂದರು. ನಂಭಾವಿತರೂ, ಪವಿತ್ರಾತ್ಮಭರಿತರೂ, ಜ್ಞಾನಸಂಪನ್ನರೂ, ಆಗಿರುವ ಏಳುಮಂದಿಯನ್ನು ನಿಮ್ಮೊಳಗೆ ನೋಡಿ ಆರಿಸಿಕೊಳ್ಳಿರಿ (ಅ.ಕೃ.6:3). ಅಪೊಸ್ತಲರ ಸೇವೆಯು ದೇವರ ವಾಕ್ಯವನ್ನು ಸಾರುವುದು ಮತ್ತು ವಿಧವೆಯರಿಗೆ ಆಹಾರ ವಿತರಣೆ ಮಾಡುವುದು ಆಗಿತ್ತು. ಅವರನ್ನು ಎರಡು ಗುಂಪನ್ನಾಗಿ ಮಾಡಿ ಎರಡು ಗುಂಪು ಸಮಾನವಾಗಿ ಸುವಾರ್ತೆ ಪ್ರಚಾರ ಕೆಲಸದಲ್ಲಿ ಭಾಗಿಯಾದರು. ಅಪೊಸ್ತಲರ ಸುವಾರ್ತೆಸೇವೆಯನ್ನು ಮತ್ತು ಸಭೆಯ ನಿರ್ವಾಹಕರು ಆಹಾರದ ವಿತರಣೆ ಸೇವೆಯನ್ನು ಒಂದೇ ಪದದಲ್ಲಿ ಲೂಕನು ಉಪಯೋಗಿಸುತ್ತಾನೆ .

**ಸಮಸ್ಯೆಗೆ ಪರಿಹಾರ ಹುಡುಕಲು ನಾಯಕರು ಅನೇಕ ಜನರನ್ನು ಒಂದುಗೂಡಿಸಿದರಲ್ಲಿ ಯಾವ ಮಹತ್ವವನ್ನು ಕಾಣುವಿರಿ?**

**ಸೋಮವಾರ** **ನವೆಂಬರ್ 12**

**ಅನ್ಯಜನರ ಪರಿವರ್ತನೆ/ಮತಾಂತರ**

ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿ ಯೇಸು ಕ್ರಿಸ್ತನ ಸುವಾರ್ತೆಯ ಮೂಲಕ ಮತಾಂತರವಾದ ಅನ್ಯಜನರ ವಿಷಯವು ಆದಿ ಸಭೆಯಲ್ಲಿ ಅನೇಕ ವಿವಾದ ಸೃಷ್ಟಿಯಾಗಲು ಕಾರಣವಾಯಿತು ಇದು ಸಭೆಯ ಉಳಿವಿಗೂ ಮತ್ತು ಧ್ಯೇಯಕ್ಕೂ ಅಪಾಯಕಾರಿಯೆಂದೆನಿಸಿತು.

**ಅಕೃ 10:1–23 ಓದಿರಿ: ಪವಿತ್ರಾತ್ಮನು ಅನೇಕ ಜನರ ಮನಸ್ಸಿನಲ್ಲಿ ಕೆಲಸ ಮಾಡಿ ಅವರು ಅನ್ಯಜನರಿಗೆ ತಲುಪುವ ಸುವಾರ್ತೆಯು ಸಿಗುವಹಾಗೆ ದಾರಿ ಮಾಡಿಕೊಟ್ಟ ಬಗ್ಗೆ ಯಾವ ಅಂಶಗಳು ಈ ವಾಕ್ಯವೃಂದದಲ್ಲಿ ಸೂಚಿಸುತ್ತವೆ?**

____________________________________________

____________________________________________

ಪೇತ್ರನಿಗೆ ಆ ಕನಸು ವಿಚಿತ್ರವೆಂದೆನಿಸಿರಬಹುದು. ಆತನು ಗಾಬ-ರಿಗೊಂಡನು, ಅವನು ನಂಬಿಗಸ್ತ ಯೆಹೂದ್ಯನಾಗಿದ್ದರು ಹಾಗಾಗಿ ಅಶುದ್ಧವಾದ ಆಹಾರವನ್ನು ಸೇವಿಸಿರಲಿಲ್ಲ (ಯಾಜಕಾಂಡ 11. ಇಜೆ 4:14, ದಾನಿ 1:8) ಆದರೂ ಈ ಕನಸು ಆಹಾರದ ಬಗ್ಗೆ ಅಲ್ಲ, ಆದರೆ ಮುನ್ನಡೆ ತಡೆಯಲು ಹಾಕಿಕೊಂಡ ಬೇಲಿಯಿಂದ ಸುವಾರ್ತೆ ಸೇವೆಯು ಕುಂಟಿತಗೊಡಿತ್ತು. ಅಂತಹ ಅಡೆತಡೆಗಳು ಇಂದು ಇರುವಂತೆಯೇ ಹಿಂದಿನ ಕಾಲದಲ್ಲೂ ಇದ್ದವು. ಹಳೆ ಒಡಂಬಡಿಕೆಯ ಪ್ರವಾಧನೆ ತಿಳಿಸುವ ಮೊದಲ ದಶಕಗಳಲ್ಲಿ ಯೇಸು ಕ್ರಿಸ್ತನನ್ನು ಮೆಸ್ಸೀಯನೆಂದು ಅಂಗೀಕಾರ ಮಾಡಿದ ಕ್ರೈಸ್ತರು ಯೆಹೂದ್ಯರಾಗಿದ್ದರು. ಈ ಮೊದಲು ಯೇಸುವಿನಲ್ಲಿ ನಂಬಿಗಸ್ತರು ಯೆಹೂದ್ಯರು ಅವರಿಗೆ ಬೋಧಿಸಿದ ನೀತಿ ನಿಯಮಗಳಿಗೆ ವಿಧೇಯರಾಗಿದ್ದಾರೆ. ಹಳೆಯ ಒಡಂಬಡಿಕೆಯ ಯಾವುದೇ ನೀತಿ ನಿಯಮಗಳನ್ನು ಯೇಸು ಕ್ರಿಸ್ತನ ಸುವಾರ್ತೆಯು ಅಳಿಸಿಹಾಕಿದೆ ಎಂಬುದನ್ನು ಅವರು ಪರಿಗಣಿಸಲಿಲ್ಲ.

**ಯೊಪ್ಪದಲ್ಲಿ ಪೇತ್ರನಿಗೆ ಬಿದ್ದ ಕನಸಿನ ಅರ್ಥವೇನು? ಹೀಗೆ ಅರ್ಥಮಾಡಿಕೊಳ್ಳಲು ಕಾರಣವೇನು?**

---------------------------------------------

---------------------------------------------

ಕ್ರೈಸ್ತ ಸಮುದಾಯದಲ್ಲಿ ಅನ್ಯಜನರು ಅನ್ಯೋನ್ಯವಾಗಿರಲು ಪವಿತ್ರಾತ್ಮನು ದಾರಿ ಮಾಡಿಕೊಟ್ಟನು ಎಂದು ಅ.ಕೃ ತಿಳಿಸುತ್ತದೆ ಮೊದಲು ಯೆಹೂದ್ಯರಾಗದೆ ಮತ್ತು ಸುನ್ನತಿ ಮಾಡಿಸಿಕೊಳ್ಳದೆ ಯೆಹೂದ್ಯರೊಂದಿಗೆ ಅನ್ಯೋನ್ಯವಾಗಿರಬಹುದಾಗಿ-ತ್ತು.

ಯೇಸುವಿನ ಶಿಷ್ಯರಿಗೆ ಪಂಚಾಶತ್ತಮ ದಿನದಂದು ಆದ ಅನುಭವದಂತೆಯೇ ಕೊರ್ನೇಲ್ಯ ಮತ್ತು ಆತನ ಮನೆಯವರಿಗೆಲ್ಲ ಪವಿತ್ರಾತ್ಮ ಭರಿತರಾದದ್ದು ದೇವರ ಚಿತ್ತವೇನೆಂದು ಪೇತ್ರನಿಗೆ ಮನದಟ್ಟಾಯಿತು. ಯೆಹೂದ್ಯರಿಗೆ ಪವಿತ್ರಾತ್ಮನನ್ನು ಕೊಟ್ಟ ಹಾಗೆ ಅನ್ಯಜನರಿಗೂ ಪಡೆದರೆ ಯೇಸುವನ್ನು ಮೆಸ್ಸೀಯನೆಂದು ನಂಬಲು ಸುನ್ನತಿ ಮಾಡಿಕೊಳ್ಳಬೇಕಾಗಿಲ್ಲ ಈ ಕಾರಣದಿಂದಾಗಿ ಆದಿ ಸಭೆಯ ಕ್ರೈಸ್ತರಲ್ಲಿ ದೊಡ್ಡ ಥಿಯಾಲಜಿ ವಿವಾದಕ್ಕೆ ಕಾರಣವಾಯಿತು.

**ಪವಿತ್ರಾತ್ಮನು ಮುನ್ನೆಡೆಸುತ್ತಿದ್ದಾನೆ**

ಕೈಸರೈಯದಲ್ಲಿ ಕೊರ್ನೇಲ್ಯನ ಮನೆಯಲ್ಲಿ ಏನಾಯಿತೋ ಆ ವರದಿ ಯೆರೂಸಲೇಮಿನ ಕ್ರಿಸ್ತ ಸಮುದಾಯದ ಅಧಿಕಾರಿಗಳಿಗೆ ತಲುಪಿತು, ಅವರು ನಡೆದ ಸಂಗತಿ ಬಗ್ಗೆ ತಿಳಿಸಲು ಪೇತ್ರನನ್ನು ಅವರು ಅರ್ಥಮಾಡಿಕೊಂಡಿದ್ದೇನೆಂದರೆ ನಂಬಿಗಸ್ತ ಯೆಹೂದ್ಯರು ಅನ್ಯಜನರೊಂದಿಗೆ ಊಟಮಾಡುವುದಿಲ್ಲ ಎಂಬುದಾಗಿ ಆದರೆ ಪೇತ್ರನು ಅನ್ಯಜನರೊಂದಿಗೆ ಸೇರಿ ಊಟ ಮಾಡಿದ್ದು ಅವರ ಮನನೋಯಿಸಿತು.

**ಅ.ಕೃ.** 11:4–18 **ಓದಿರಿ: ಈ ಸಂಗತಿಯಲ್ಲಿ ಪವಿತ್ರಾತ್ಮನ ಕೆಲಸ ಮತ್ತು ಆತನ ನಡೆಸುವಿಕೆಯ ಬಗ್ಗೆ ಪೇತ್ರನು ವಿಶ್ಲೇಷಿಸಿ ಏನು ಹೇಳಿದನು**? **ಅಲ್ಲಿ ನಡೆದ ಸಂಗತಿಯನ್ನು ನೆನೆಪು ಮಾಡಿಕೊಂಡು ಯಾವ ಮುಖ್ಯವಾದ ಅಂಶವನ್ನು ತಿಳಿಸಿದ**?

____________________________________________

____________________________________________

ಪೇತ್ರನ ನ್ಯಾಯುಯಿತವಾದ ಕಾಯ್ದೆ ಮತ್ತು ಅನ್ಯಜನರಿಗೆ ದೀಕ್ಷಾಸ್ನಾನ ಕೊಡಬೇಕೆಂಬ ನಿರ್ಧಾರ ಬಗ್ಗೆ ಅನೇಕರು ಪ್ರಶ್ನಿಸಿದರು. ಪಂಚಾಶತ್ತಮದಂದು ಪವಿತ್ರಾತ್ಮನ ಪ್ರಸನ್ನತೆಯು ಹಾಗೆ ಈಗಲೂ ಪ್ರಸನ್ನತೆಯು ಇರುವುದನ್ನು ಸಾಬೀತು ಪಡಿಸಲು ಬೇಕಾದಷ್ಟು ಸಾಕ್ಷಿಗಳಿವೆ, ಈ ವಿಷಯದಲ್ಲಿ ಪವಿತ್ರಾತ್ಮನ ಮಾರ್ಗದರ್ಶನ ಮತ್ತು ನಡೆಸುವಿಕೆಯನ್ನು ಟೀಕಿಸಲಾಗದು. ಹೀಗೆಂದ ಮಾತುಗಳನ್ನು ಆ ಸುನ್ನತಿಯವರು ಕೇಳಿ ಅಕ್ಷೇಪಣೆ ಮಾಡುವುದನ್ನು ಬಿಟ್ಟು ಹಾಗಾದರೆ ದೇವರು ಅನ್ಯಜನರಿಗೂ ಜೀವಕೊಡಬೇಕೆಂದು ಅವರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸಿದ್ದಾನೆ ಎಂದು ದೇವರನ್ನು ಕೊಂಡಾಡಿದರು(ಅ.ಕೃ. 11:18)

**ಅ.ಕೃ** 11:19–24 **ಓದಿರಿ: ಆದಿ ಜನರ ಜೀವನದಲ್ಲಿ ಮುಂದೇನಾಯಿತು**?

____________________________________________

____________________________________________

ಯೆರೂಸಲೇಮಿನ ಕೆಲವು ಜನರು ಕೊರ್ನೇಲ್ಯ ಮತ್ತು ಆತನ ಮನೆಯವರೊಂದಿಗೆ ನಡೆದದ್ದು ಅಸಾಧಾರಣವಾದದ್ದು ಅಂಥ ಸಂಗತಿಗಳು ಇನ್ನು ಮುಂದೆ ನಡೆಯುವುದಿಲ್ಲ ಎಂದು ಅಂದುಕೊಂಡರು ಆದರೆ ಪವಿತ್ರಾತ್ಮನು ಸ್ತೆಫೆನನ

ಮರಣದನಂತರ ಹಿಂಸೆಯು ಹೆಚ್ಚಾದ ಕಾರಣ ಯೇಸುವಿನ ಶಿಷ್ಯರು ಯೆರೂಸಲೇಮು ಮತ್ತು ಯೂದಾಯದಿಂದ ಆಚೆಯ ಸಮಾರ್ಯ, ಫೊಯಿನಿಕೆ, ಕುಪ್ರ ದ್ವೀಪ ಅಂತಿಯೋಕ್ಯಕ್ಕೆ ಚದುರಿ ಹೋದರು. ಆದುದರಿಂದ ಹೆಚ್ಚು ಅನ್ಯಜನರು ಯೇಸುವನ್ನು ರಕ್ಷಕ ಎಂದು ಅಂಗೀಕರಿಸಿದರು.

**ಬುಧವಾರ** **ನವೆಂಬರ್ 14**

**ಯೆರೂಸಲೇಮಿನ ಸಭೆ**

**ಅ.ಕೃ. 15:1,2 ಮತ್ತು ಗಲಾತ್ಯ 2:11–14, ಯಾವ ಎರಡು ಸಮಸ್ಯೆಗಳು ಸಭೆಯಲ್ಲಿ ಗಂಭೀರವಾದ ವಿವಾದಕ್ಕೆ ಕಾರಣವಾದವು?**

———————————————————————————————

———————————————————————————————

ಆದಿ ಕ್ರೈಸ್ತರು ಸಭೆಯ ಐಕ್ಯತೆಗೆ ಎದುರಿಸಿದ ಬೆದರಿಕೆಯು ಸತ್ಯ ಮತ್ತು ಕಷ್ಟಕರವಾದದ್ದಾಗಿತ್ತು. ಕೆಲವು ಯೆಹೂದ್ಯ ಕ್ರೈಸ್ತರು ರಕ್ಷಣೆಯು ದೇವರ ಸ್ವಕೀಯ ಜನರಿಗೆ ಮಾತ್ರ ಸಾಧ್ಯ ಮತ್ತು ಸುನ್ನತಿ ಅವಶ್ಯವಾಯಿತು. ಅದು ನಂಬಿಗಸ್ತರ ಜೀವನ ಶೈಲಿಯಾಗಿತ್ತು, ಈ ಯೆಹೂದ್ಯ ನಂಬಿಗಸ್ತರು ತಮಗೆ ರಕ್ಷಣೆ ಸಿಗದೆಹೋಗಬಹುದೆಂದು ತಿಳಿದು ಅವರು ಅನ್ಯಜನರೊಂದಿಗೆ ಯಾವುದೇ ಸಂಪರ್ಕ ಇಟ್ಟುಕೊಳ್ಳುತ್ತಿರಲಿಲ್ಲ.

ಅನ್ಯ ಜನರೊಂದಿಗೆ ಬೆರೆಯುವ ಸಂಬಂಧವಾಗಿ ಬಹಳ ಕಟ್ಟುನಿಟ್ಟಿನ ಸಂಪ್ರದಾಯ ಯೆಹೂದ್ಯರದ್ದಾಗಿತ್ತು. ಯೇಸುವಿನ ಹಿಂಬಾಲಿಕರಾಗಲು ಇಚ್ಚೆಸುವ ಅನ್ಯಜನರನ್ನು ಅಪೊಸ್ತಲರು ಪ್ರಾರಂಭಿಸಿದಾಗ ಕ್ರೈಸ್ತ ಸಮುದಾಯವರಿಗೆ ಅಡ್ಡಿಯಾಯಿತು. ಹಳೆಯ ಒಡಂಬಡಿಕೆಯಲ್ಲಿ ತಿಳಿಸಿದ ಪ್ರಕಾರ ದೇವರ ಸ್ವಕೀಯ ಜನರ ರಕ್ಷಕನು ಮೆಸ್ಸೀಯನು.

**ಅ.ಕೃ. 15:3–22 ಓದಿರಿ: ಯೆರೂಸಲೇಮಿನ ಸಭೆಯಲ್ಲಿ ಯಾವ ಕೆಲವು ಸಮಸ್ಯೆಗಳನ್ನು ಪ್ರಸ್ತುತ ಪಡಿಸಿದರು?**

———————————————————————————————

———————————————————————————————

ಸುನ್ನತಿ ಮತ್ತು ಅನ್ಯಜನರೊಂದಿಗಿನ ಸಂಬಂಧಗಳ ಬಗ್ಗೆ ಹಳೆಯ ಒಡಂಬಡಿಕೆ ಕಥೆಗಳ ವ್ಯಾಖ್ಯಾನವು ಅಂತಿಯೋಕ್ಯದ, ಹಿರಿಯರು, ಸದಸ್ಯರು ಸಭೆ ಸೇರಿ ದೀರ್ಘಕಾಲ ಚರ್ಚಿಸಿದರೂ ಯಾವುದೇ ತೀರ್ಮಾನ ತೆಗೆದುಕೊಳ್ಳಲಾಗಲಿಲ್ಲ.

ಆದರೆ ಪೇತ್ರ, ಬಾರ್ನಬ ಮತ್ತು ಪೌಲನು ಸಂದೇಶ ನೀಡಿದರು ಆದರೆ ಪೇತ್ರನ ಸಂದೇಶವು ಅಪ್ರತ್ಯಕ್ಷವಾಗಿ ದೇವರಿಂದ ಬಂದ ಕನಸು ಮತ್ತು ಪವಿತ್ರಾತ್ಮ ವರವು ಅನ್ಯಜನರಿಗೆ ದಾರಿ ಮಾಡಿಕೊಟ್ಟಿತು. ದೇವರು ಪೌಲನು ಮತ್ತು ಬಾರ್ನಬನು ತಮ್ಮ ಮೂಲಕ ದೇವರು ಅನ್ಯಜನರಿಗೆ ಮಾಡಿದ ಕಾರ್ಯಗಳ ಬಗ್ಗೆ ಹಂಚಿಕೊಂಡರು. ಅದರ ಫಲವಾಗಿ ಅನೇಕರು ಸತ್ಯದ ಕಡೆಗೆ ಕಣ್ಣು ತೆರೆದರು. ಕರ್ತನಾದ ಯೇಸುವಿನ ಕೃಪೆಯಿಂದಲೇ ನಾವು ರಕ್ಷಣೆ ಹೊಂದುವೆವೆಂಬುದಾಗಿ ನಂಬುತ್ತೇವೆಲ್ಲಾ. ಹಾಗೆಯೇ ಅವರೂ ಹೊಂದುವರು ಎಂದು ಪೇತ್ರನು ಹೇಳಿದನು (ಅ.ಕೃ. 15:11). ಶತಮಾನಗಳಿಂದ ನಡೆದುಕೊಂಡು ಬಂದ ಸಂಪ್ರದಾಯವು ಸುವಾರ್ತೆಯ ಬೆಳಕಿನಲ್ಲಿ ಬಿಟ್ಟುಹೋಯಿತು..

**ಗುರುವಾರ** **ನವೆಂಬರ್** 15

**ಕಷ್ಟಕರವಾದ ಪರಿಹಾರ**

ಅಂತಯೋಕ್ಯ ಸಭೆಯವರು ಸಭೆಯ ಸಮ್ಮತಿಯಿಂದ ಕೆಲವರನ್ನು ಆರಿಸಿಕೊಂಡು ಅವರ ವಿವಾದಕ್ಕೆ ಪರಿಹಾರ ಹುಡುಕಲು ಯೆರೂಸಲೇಮಿಗೆ ಕಳುಹಿಸಿದರು. ಆದರೂ ಕೆಲವು ಗಂಟೆಗಳ ಕಾಲ ಅಪೊಸ್ತಲರು, ಹಿರಿಕರು, ನಾಯಕನಾಗಿದ್ದ ಯೇಸುವಿನ ಸಹೋದರನಾದ ಯಾಕೋಬನು ಏನು ಮಾಡಬೇಕೆಂಬದನ್ನು ನಿರ್ಣಯಿಸಿದನು. (ಅ.ಕೃ. 15:13–20) ಕ್ರೈಸ್ತರಾಗಲು ಸಭೆಯು ಅನ್ಯಜನರು ಮೊದಲು ಯೆಹೂದ್ಯರಾಗಿ ಮತಾಂತರವಾಗಬೇಕಾಗಿಲ್ಲ ಎಂದು ಸ್ಪಷ್ಟವಾದ ನಿರ್ಧಾರ ತೆಗೆದುಕೊಂಡರು ಮತ್ತು ಸುನ್ನತಿಯನ್ನು ಸಹ ಒಳಗೊಂಡಿತ್ತು.

**ಆಮೋಸ 9:11,12 ಮತ್ತು ಯೆರೆಮೀಯ 12:14–16 ಓದಿರಿ: ಇಸ್ರಾಯೇಲ್ಯರ ನೆರ ರಾಷ್ಟ್ರಗಳ ಬಗ್ಗೆ ಹಳೆಯ ಒಡಂಬಡಿಕೆಯ ಪ್ರವಾದಿಗಳು ಭವಿಷ್ಯ ನುಡಿದಿದ್ದರು**

––––––––––––––––––––––––––––––––––––––––––––

––––––––––––––––––––––––––––––––––––––––––––

ಆಮೋಸ 9ನೇ ಅಧ್ಯಾಯದಲ್ಲಿ ಯಾಕೋಬನು ಹೇಳುತ್ತಾನೆ, ನಾವು ಹಳೆಯ ಒಡಂಬಡಿಕೆಯ ಪ್ರವಾದಿಗಳು ನೆರ ರಾಷ್ಟ್ರಗಳ ರಕ್ಷಣೆಯ ಬಗ್ಗೆ ಸೂಚನೆ ನೀಡುತ್ತಾರೆ. ಇಸ್ರಾಯೇಲಿನ ಸಾಕ್ಷಿ ಮತ್ತು ಅನುಭವದ ಮೂಲಕ ಇಡೀ ಜಗತ್ತನ್ನು ರಕ್ಷಿಸುವ ಇಚ್ಛೆ ದೇವರಿಗೆ ಇತ್ತು. ನಿಜವಾಗಿಯೂ ದೇವರು ಅಬ್ರಹಾಮನ ಕರೆಯುವಿಕೆಯಲ್ಲಿ ಎಲ್ಲಾ ದೇಶಗಳನ್ನು ಅಬ್ರಹಾಮನ ಮತ್ತು ಆತನ ಸಂತತಿಯ

ಮೂಲಕ ಆಶೀರ್ವದಿಸಬೇಕೆಂಬುದು ಒಳಗೊಂಡಿತ್ತು. ಪವಿತ್ರಾತ್ಮನ ನಡೆಸುವಿಕೆ ಮತ್ತು ಅನ್ಯಜನರ ಮಧ್ಯೆ ಪೇತ್ರ, ಬಾರ್ನಬ ಮತ್ತು ಪೌಲರ ಸುವಾರ್ತೆ ಸೇವೆ ಮತ್ತು ಅನೇಕ ಅನ್ಯಜನರು ಮತಾಂತರವಾದದ್ದು ಸಾಕ್ಷಿಗಳಾಗಿವೆ ಇವುಗಳನ್ನು ಬೇರೆ ಮಾಡುವಂತಿಲ್ಲ ಹಳೆಯ ಒಡಂಬಡಿಕೆಯ ಪ್ರವಾದನೆಗಳು ಈಗ ನೆರವೇರಿದವೆಂದು ಯೆರೂಸಲೇಮಿನ ಕ್ರೈಸ್ತ ಸಮುದಾಯದ ನಾಯಕರು ಅರಿತುಕೊಂಡರು. ಇಸ್ರಾಯೇಲಿನಲ್ಲಿನ ಅನ್ಯಜನ–ರಿಗೆ ದೇವರು ಆಗಲೇ ನ್ಯಾಯವಿಧಗಳನ್ನು ಕೊಟ್ಟಿದ್ದನು ಮತ್ತು ಅವರಿಗೆ ಯಾವ ನಿರ್ಬಂಧಗಳು ಅನ್ವಯವಾಗುವವು ಎಂಬುದನ್ನು ತಿಳಿಸಿದ್ದನು (ಯಾಜ 17:18). ಈ ನಿಯಮಗಳ ಬಗ್ಗೆ ಯಾಕೋಬನು ತನ್ನ ನಿರ್ಧಾರದಲ್ಲಿ ಉಲ್ಲೇಖಿಸಿದನು(ಅ. ಕೃ. 15:29). ದೇವರು ಅನ್ಯಜನರು ತನ್ನ ಜನರೊಂದಿಗೆ ಸೇರಿ ಯೇಸುವಿನಲ್ಲಿ ರಕ್ಷಣೆ ಪಡೆಯಲು ಅವರನ್ನು ಕರೆದಿದ್ದನು ಎಂಬುದು ಎಲ್ಲರಿಗೂ ಗೊತ್ತಾಯಿತು. ಪವಿತ್ರಾತ್ಮನ ಮಾರ್ಗದರ್ಶನದ ಮೂಲಕ ಮಾಕ್ಯಗಳನ್ನು ಆಳವಾಗಿ ಅರ್ಥಮಾಡಿಕೊಂಡರು ಮತ್ತು ಅವರು ಎಂದೂ ಕಾಣದಿರುವ ಸತ್ಯವನ್ನು ಕಂಡುಕೊಂಡರು.

ಅಂತಿಯೋಕ್ಯದಲ್ಲಿ ನಂಬಿಗಸ್ತರು ಯೆರೂಸಲೇಮಿನಲ್ಲಿ ತೆಗೆದುಕೊಂಡ ನಿರ್ಧಾರಗಳ ಬಗ್ಗೆ ಹೇಗೆ ಪ್ರತಿಕ್ರಿಯಸಿದರು ಎಂಬುದನ್ನು ಅ.ಕೃ. 15:30–35ರಲ್ಲಿ ತಿಳಿಸಲಾಗಿದೆ. ಧೈರ್ಯಕೊಡುವ ಸಂದೇಶದಿಂದಾಗಿ ಜನರು ಸಂತೋಷ ಪಟ್ಟರು. ಅ.ಕೃ.ಗಳಲ್ಲಿ ಬಲವಾದ ಉದಾರಣೆಯನ್ನು ನೋಡುತ್ತೇವೆ, ಹೇಗೆ ಆದಿ ಸಭೆಯು ದೇವರ ವಾಕ್ಯಗಳಿಗೆ ಒಪ್ಪಿಸಿಕೊಟ್ಟು ಜೊತೆಯಲ್ಲಿ ಪ್ರೀತಿಯ ಮನಸ್ಸುಳ್ಳವರಾಗಿ, ಐಕ್ಯತೆ ಮತ್ತು ನಂಬಿಕೆ ಮತ್ತು ಪವಿತ್ರಾತ್ಮನ ನೆಡೆಸುವಿಕೆಯಿಂದ ಐಕ್ಯತೆಯ ದೊಡ್ಡ ಬಿಕ್ಕಟ್ಟನ್ನು ತೊಲಗಿಸಿದರು.

**ಈ ಅಂಶವು ನಮಗೆ ಎಷ್ಟು ಮೂಖ್ಯವೆಂಬುದರ ಬಗ್ಗೆ ಏನನ್ನು ತಿಳಿಸುತ್ತದೆ. ಬೇರೆಯವರು ಏನು ಹೇಳುತ್ತಿದ್ದಾರೆ ಎಂಬುದನ್ನು ಕೇಳುವುದಲ್ಲದೆ ಅದು ಸರಿ ಇರಬಹುದು ಎಂದು ಪರಿಗಣಿಸಬೇಕು. ನಾವು ಏನು ಕೇಳಬೇಕು ಎಂದು ಅಂ–ದುಕೊಂಡಿದ್ದೇವೋ ಅದು ಅಲ್ಲದಿದ್ದರೂ ಸಹ ಕೇಳಬೇಕು.**

**ಶುಕ್ರವಾರ** **ನವೆಂಬರ್ 15**

**ಎಲ್ಲೆನ್ ಜಿ ವೈಟ್ " ಎ ಸೀಕರ್ ಫಾರ್ ಟ್ರೂತ್" ಪು. 131–142. "ಜೂವ್ ಆಂಡ್ ಜಂಟೈಲ್" ಮತ್ತು ಅ.ಕೃತ್ಯಗಳಲ್ಲಿ.**

ಈ ವಿಷಯದಲ್ಲಿ ನಿರ್ಧಾರ ತೆಗೆದುಕೊಂಡ ಸಭೆಯಲ್ಲಿ ಅಪೊಸ್ತಲರು ಯೆಹೂದ್ಯ ಮತ್ತು ಕ್ರೈಸ್ತ ಅನ್ಯಜನರ ಸಭೆಯನ್ನು ಬೆಳಗಿಸಿದ ಪ್ರಮುಖ ಬೋಧಕರು

ಬೇರೆ ಬೇರೆ ಊರುಗಳಿಂದ ಬಂದ ಸದಸ್ಯರು ಒಳಗೊಂಡಿದ್ದರು. ಯೆರೂಸಲೇಮಿನ ಹಿರೀಕರು ಮತ್ತು ಅಂತಿಯೋಕ್ಯದ ಪ್ರತಿನಿಧಿಗಳು ಉಪಸ್ಥಿತರಿದ್ದರು. ಇವರು ಪ್ರತಿಷ್ಠಿತ ಸಭೆಯವರಾಗಿದ್ದರು. ದೈವಿಕ ಚಿತ್ತದಿಂದ ಸ್ಥಾಪಿಸಲ್ಪಟ್ಟ ಸಭೆಗೆ ಗೌರವವನ್ನು ನೀಡಿ ಮತ್ತು ತಿಳುವಳಿಕೆ ನಿರ್ಣಯವನ್ನು ಸಭೆಯು ಒಪ್ಪಿಕೊಂಡಿತು. ಅನ್ಯಜನರಿಗೆ ಪವಿತ್ರಾತ್ಮನನ್ನು ದಯಪಾಲಿಸುವ ಮೂಲಕ ಸಮಸ್ಯಗೆ ದೇವರು ತಾನೇ ಉತ್ತರ ನೀಡಿರುವದನ್ನು ಅವರು ಕಂಡರು ಮತ್ತು ಪವಿತ್ರಾತ್ಮನ ಮಾರ್ಗದರ್ಶನದಂತೆ ನಡೆಯಬೇಕೆಂದು ಅರಿತುಕೊಂಡರು. ಇಡೀ ಕ್ರೈಸ್ತರನ್ನು ಮತ ನೀಡಲು ಕರೆದಿರಲಿಲ್ಲ, ಅಪೊಸ್ತಲರು, ಹಿರೀಕರು ಮತ್ತು ಪ್ರಭಾವಾನ್ವಿತರು ತೀರ್ಪನ್ನು ರಚಿಸಿ ಹೊರಡಿಸಿದರು ಮೇಲೆರ ಎಲ್ಲಾ ಕ್ರೈಸ್ತ ಸಭೆಗಳು ಸಮಾನವಾಗಿ ಅಂಗೀಕರಿಸಿದರು. ಆದರೂ ಕೆಲವ–ರಿಗೆ ಈ ನಿರ್ಭಯದಿಂದ ತೃಪ್ತಿಯಾಗಲಿಲ್ಲ ಮಹತ್ವಕಾಂಕ್ಷೆ ಮತ್ತು ಆತ್ಮವಿಶ್ವಾಸವು ಸಹೋದರರ ಗುಂಪೊಂದು ಇದನ್ನು ಒಪ್ಪಲಿಲ್ಲ. ಇವರು ಗುಣಗುಟ್ಟುತ್ತ ತಪ್ಪುಗಳನ್ನು ಹುಡುಕುತ್ತ, ಸುವಾರ್ತೆ ಸೇವೆಗೆ ದೇವರು ನಿಯಮಿಸಿದವರ ಕೆಲಸಕ್ಕೆ ಅಡ್ಡಿ ಮಾಡುವ ಯೋಜನೆಗಳನ್ನು ಹುಡುಕುತ್ತ ಇದ್ದರು. ಆದಿಯಿಂದಲೂ ಸಭೆಯು ಇಂಥ ಅಡೆತಡೆಗಳನ್ನು ಎದುರಿಸುತ್ತಾ ಬಂದಿದೆ, ಕೊನೆಯವರೆಗೂ ಎದುರಿಸುತ್ತದೆ. ಎಲೆನ್ ಜಿ ವೈಟ್ "ದಿ ಆಕ್ಟ್ಸ್ ಆಫ್ ಅಪೊಸ್ಟಲ್ಸ್" ಪು. 196, 197.

**ಚರ್ಚೆಯ ಪ್ರಶ್ನೆಗಳು:**

1. ಈ ವಾರ ನಾವು ನೋಡಿರುವ ಹಾಗೆ ವಿವಾದಗಳನ್ನು ಬಗೆಹರಿಸಲು ಕೈಗೊಂಡ ಕ್ರಮಗಳನ್ನು ನಿಮ್ಮ ಸಭೆಯ ಸಮುದಾಯದಲ್ಲಿ ಭಿನ್ನಭಿಪ್ರಾಯಗಳು ಬಂದಾಗ ಹೇಗೆ ಅನ್ವಯಿಸುತ್ತವೆ? ಇಲ್ಲಿ ಸಭೆಯು ಐಕ್ಯತೆಗೆ, ಸಂಸ್ಕೃತಿ, ರಾಜಕೀಯ, ಸಂಪ್ರದಾಯಿಕ ಸಮಸ್ಯೆಗಳು ಅಡ್ಡಯಾದಾಗ – ಹೇಗೆ ಸಹಾಯಕವಾಗಿದೆ. ಯಾವ ಮುಖ್ಯವಾದ ಮೂಲತತ್ವಗಳನ್ನು ತೆಗೆದುಕೊಳ್ಳಬೇಕು?
2. ಮೇಲ್ಕಂಡ ಎಲ್ಲೆನ್ ಜಿ ವೈಟ್‌ಮ್ಮನವರ ಹೇಳಿಕೆಯನ್ನು ನೋಡಿ ಸಕಾರಾತ್ಮಕ ನಿರ್ಣಯ ಬಂದರೂ ಕೆಲವರು ಅತೃಪ್ತರಾಗಿದ್ದರು. ಈ ಸತ್ಯದಿಂದ ನಾವು ಯಾವ ಪಾಠವನ್ನು ಕಲಿಯಬೇಕು?

**ಸಾರಾಂಶ:** ಆದಿ ಸಭೆಯ ಅನೇಕ ಸಮಸ್ಯೆಗಳಾದದ ಒಳ ಜಗಳಗಳು/ವಿವಾದಗಳಿಂದಾಗಿ ಅಪಾಯವನ್ನು ಎದುರಿಸಿತು. ಅದರಿಂದ ಸಭೆಯು ನಾಶವಾಗಿ ಹೋಗುವ ಪರಿಸ್ಥಿತಿ ಎದುರಿಸಿತ್ತು ಪವಿತ್ರಾತ್ಮನ ಸಹಾಯದಿಂದ ಮತ್ತು ದೇವರ ವಾಕ್ಯಕ್ಕೆ ತಮ್ಮನ್ನು ತಾವು ಒಪ್ಪಿಸಿಕೊಡುವುದರಿಂದ ಸಭೆಯ ವಿವಾದಗಳ ಬಗೆಹರಿಸಿ ನಾಶವಾಗುವುದನ್ನು ತಪ್ಪಿಸಿದರು.